## ಕಲ್ಪನೆ ಕಾವ್ಯ

# ಪ್ರೇಮದಾಟ

ಬಾನಿನಿಂದ ಮುತ್ತಿನಂಥ
ಹನಿಗಳುದುರಿ ಕಡಲಿಗೆ
ಮತ್ತೆ ಸೇರಿ; ಮತ್ತಿನಂತೆ ಬೀಗುತಿರುವ ಸಾಗರಾ
ಮಳೆಯೋ ಜೇನೋ
ತಿಳಿಯದಂತ ಮುಗಿಲಿನೋಗರ
ಜಲವೇ ಜೀವ; ಸಕಲಕೋಟಿ ದೇಹಕಾಧಾರ

ಅಹಂ ಬಿಟ್ಟು
ಬಾಗಿ ಮುಗಿಲು
ಕೊಡುಕೊಳ್ಳುವ ಬದುಕು ಎಷ್ಟು ಸುಂದರ
ದೈತ್ಯ ಶಕ್ತಿ
ನೆನೆದು ಬೀಗೇ
ಉಂಟೇ...ಜಗದಿ ಬಂಧುರ...!?

ಬೀಗಲಿಲ್ಲ ಮೋಡ
ಎಲ್ಲ ದಾಟಿ ಎತ್ತರೆಂದು
ಪರರ ಪಾಡಿಗಾಗದವನು ಏನು ಏರಿದರೇನು...!?
ಎಂದು
ಸೀಮೆ ಕಟ್ಟಿಕೊಂಡರಲ್ಲೇ
ದ್ವೇಷ ಪಾಷ ಭಾಷೆಯು
ಗಡಿಯ ಅಳಿದು ಗೋಡೆ ಕೊರೆದರಲ್ಲೇ ಬದುಕು ಹಂದರ

ಮೇಲೆ ಕೆಳಗೆ
ಎಲ್ಲಾ ಸುಳ್ಳು
ಮನದ ಮುಳ್ಳು ಕಳೆದರಲ್ಲಿ
ದೂರ ಸನಿಹ
ಸನಿಹ ಸ್ನೇಹ
ಪ್ರೇಮದಾಟ ಮೂಡುವಲ್ಲಿ

**-ಯಮುನಾ ಕಂಬಾರ, ಕಪ್ಪಲಿ**



# ನಾಲ್ಕಿಂಚು ಮೊಬೈಲು ಸೆರೆಯಾಗುವುದೇ ಕಡಲು?

ರುದ್ರರಮಣೀಯ ಭೋರ್ಗರೆವ ಕಡಲನ್ನು
ನಾಲ್ಕಿಂಚು ಮೊಬೈಲ್‌ನಲ್ಲಿ ಸೆರೆ ಹಿಡಿಯಲಳವೆ?

ಭೀಕರದ ಅಲೆಗಳಲಿ ಬೀಸಿ ಬರುತಿಹ ಗಾಳಿ
ಬಣ್ಣ ಬಣ್ಣದ ಛತ್ರಿ ತಡೆಯಲುಂಟೆ?

ಬಿಳಿ ಮೋಡ ತುಂಬಿರುವ ಧರೆಗಿಳಿದ ಅಂಬರದಿ
ಅಂದದಾ ಅಲೆಗಳನು ಮೊಗೆದಿಡಲುಬಹುದೇ?

ಬಿಳಿ ಮರಳ ರಾಶಿಯಲಿ, ಕಡಲ
ಭೋರ್ಗರೆತದಲಿ
ಸೆರೆಹಿಡಿವ ಧಾವಂತದಲಿ ಮೈಮರೆವುದುಂಟೆ?

ಬೆಳ್ದೊರೆಯ ಕಡಲನು ರಮಣೀಯ ನೋಟವನು
ಜೀವಿತದಲಿ ನಾವು ಮರೆಯಲುಂಟೆ?

**-ನಯನತಾರಾ ಎಚ್.ಎಸ್.,**
**ಬೆಂಗಳೂರು**